**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No.459/2018**

**CW- 10** **PW:10**

| | |
|---|---|
| ಸಾಕ್ಷಿಯ ಹೆಸರು | ಃ ಕುಶಾಲ್ ಹಜಾರೆ |
| ತಂದೆ /ಗಂಡನ ಹೆಸರು | ಃ ಪದ್ಮಪ್ರಬು |
| ವಯಸ್ಸು | ಃ 34 ವರ್ಷ |
| ಉದ್ಯೋಗ | ಃ ಏನೂ ಇಲ್ಲ |
| ವಾಸಸ್ಥಳ | ಃ ನವನಗರ ಹುಬ್ಬಳ್ಳಿ. |

ದಿಃ **02.04.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

2013 ರಿಂದ 2023 ರವರೆಗೂ ನವನಗರ ಮುಥೂಟ್ ಪೈನಾನ್ಸ ಶಾಖೆಯಲ್ಲಿ ಸಬ್ ಸ್ಟಾಫ್ ಆಗಿ ಕಾರ್ಯನಿರ್ವಹಿಸಿದ್ದೆ. ಆಗ ಮ್ಯಾನೆಜರ್ ಆಗಿ ಚಾಸಾಃ 4 ಇದ್ದರು. ಚಾಸಾಃ 5 ರವರು ಅಸಿಸ್ಟಂಟ ಮ್ಯಾನೇಜರ್ ಆಗಿದ್ದರು. ಆರೋಪಿ ನಂ.1 ಹಾಗೂ ರಮೇಶ ನರಗುಂದ ಇವರು ನಮ್ಮ ಸಂಸ್ಥಗೆ ಕಳುವಾದ ಮಾಲನ್ನು ತಮ್ಮವು ಅಂತಾ ನಮ್ಮನ್ನು ನಂಬಿಸಿ ನಮ್ಮ ಸಂಸ್ಥೆಯಿಂದ ಸಾಲ ಪಡೆದಿದ್ದಾರೆ. 1 ನೇ ಆರೋಪಿ ರೂ 5,28,000/- ಸಾಲ ಹಾಗೂ ರಮೇಶ ನರಗುಂದ ಇವರು ರೂ 3 ಲಕ್ಷ ಚಿಲ್ಲರೆ ಸಾಲ ಪಡೆದಿದ್ದಾರೆ. 8 ಬಾರಿ ನಮ್ಮ ಸಂಸ್ಥೆಯಿಂದ ಸಾಲ ಪಡೆದಿದ್ದಾರೆ. ಆರೋಪಿ ನಂ.1 ಮತ್ತು ರಮೇಶ ನರಗುಂದ ಇವರ ಐಡಿ ನಂಬರಗಳು ಗೊತ್ತಿಲ್ಲ. ನಂತರ ಒತ್ತೆ ಇಟ್ಟ ಆಭರಣಗಳು ಕಳುವು ಮಾಲು ಅಂತಾ ಕೇಶ್ವಾಪುರ ಪೊಲಿಸರು ನಮಗೆ ತಿಳಿಸಿದರು. ಚಾಸಾಃ 4 ರವರಿಂದ ಪೊಲಿಸರು ಒತ್ತೆ ಇಟ್ಟ ಆಭರಣಗಳನ್ನು ಜಪ್ತಿ ಮಾಡಿಕೊಂಡರು. ಯಾವ ಇಸವಿಯಲ್ಲಿ ಜಪ್ತಿ ಮಾಡಿಕೊಂಡರು ಎನ್ನುವುದು ನೆನಪಿಲ್ಲ. ಈ ಘಟನೆಯ ಬಗ್ಗೆ ಪೊಲಿಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

1 ನೇ ಆರೋಪಿಯ ನಮ್ಮ ಸಂಸ್ಥೆಯಲ್ಲಿನ ಗ್ರಾಹಕ ಐಡಿ ಸಂಖ್ಯೆ 2043 ಎನ್ನುವುದು ನನಗೆ ನೆನಪಿಲ್ಲ. ರಮೇಶ ನರಗುಂದ ಇವರ ಐಡಿ ಸಂಖ್ಯೆ 2058 ಎನ್ನುವುದು ನನಗೆ ನೆನಪಿಲ್ಲ. ದಿಃ 23.03.2013 ರಂದು ಪೊಲಿಸರು ನಮ್ಮ ಶಾಖೆಯಿಂದ ಬಂಗಾರದ ಆಭರಣಗಳನ್ನು ಜಪ್ತಿ ಮಾಡಿಕೊಂಡರು ಎಂದರೆ ಸರಿ.

**1 ನೇ ಆರೋಪಿ ಪರ ವಕೀಲರು ಪಾಟಿಸವಾಲಿಗೆ ಸಮಯ ಕೋರಿದ್ದು ಯಾವದೇ ಸಕಾರಣ ಇರದೇ ಇರುವುದರಿಂದ ಪಾಟಿಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**

**3 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**